***<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕೊಪ್ಪ</u>***

***<u>ಸಿ.ಸಿ. ನಂಃ 39/2020</u>***

***<u>ಫಿರ್ಯಾದುದಾರರು</u>*** ಃ ಮೆ. ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್
ನಿಯಮಿತ (ರಿ), ವಿನೋಭ ರಸ್ತೆ, ಕೊಪ್ಪ – 577 126,
ಪ್ರತಿನಿಧಿಸಿದವರುಃ ಮುಖ್ಯ ಕಾರ್ಯನಿರ್ವಹಣಾಧಿಕಾರಿ.

ಃವಿಃ

***<u>ಆರೋಪಿತರು</u>*** ಃ ಶ್ರೀ. ಸತೀಶ್ ಎಸ್.ಕೆ., ಬಿನ್. ಶ್ರೀ. ಕೃಷ್ಣಯ್ಯ,
ವಯಸ್ಕರು, ವಾಸಃ ಸಸಿಮನೆ,
ಬಸರಿಕಟ್ಟೆ ಅಂಚೆ, ಮೇಗುಂದ ಹೋಬಳಿ,
ಕೊಪ್ಪ ತಾಲ್ಲೂಕು.

- - -

***<u>ಆ ಪಾ ದ ನೆ</u>***

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಆರೋಪಿ 21,00,000/- ರೂ.ಗಳ 22.11.2018ನೇ ದಿನಾಂಕವನ್ನು ನಮೂದಿಸಿರುವ, 116347ನೇ ಸಂಖ್ಯೆಯ, ಕರ್ನಾಟಕ ಬ್ಯಾಂಕ್, ತರೀಕೆರೆ ಶಾಖೆಯ ಒಂದು ಚೆಕ್ಕನ್ನು ಫಿರ್ಯಾದುದಾರರಿಗೆ ಕೊಡಬೇಕಾದ ಹಣದ ಬಾಬ್ತು ನಗದೀಕರಣಕ್ಕಾಗಿ ನೀಡಿದ್ದು, ಫಿರ್ಯಾದುದಾರರು ಅದನ್ನು ಜಮಾವಣೆಗಾಗಿ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ, ಬ್ಯಾಂಕಿನವರು "Drawer's signature differs from specimen filed in this office" ಎಂಬ ಹಿಂಬರಹದೊಂದಿಗೆ ಅದನ್ನು ವಾಪಾಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ನೋಟೀಸನ್ನು ಕೊಟ್ಟರೂ ಸಹಾ ನೀವು ಆರೋಪಿ ಚೆಕ್ಕಿನಲ್ಲಿ ಒಳಗೊಂಡ ಹಣವನ್ನು

ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರ:1: ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉ: ತಿಳಿಯಿತು

ಪ್ರ:2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ: ವಿಚಾರಣೆ ಆಗಬೇಕು.

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ: 2ನೇ ದಿವಸ, ಆಗಸ್ಟ್ ಮಾಹೆ, 2021.

ಸಹಿ...... 2.8.2021
(ಪ್ರಿಯಾ ರವಿ ಜೋಗಳೆಕರ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ;ಕೊಪ್ಪ.